## 19

# "ಒಂದು ಮಾತ್ರ ಬಲ್ಲೆ"

## (9:6-41)

ಕೆಲವು ಸಲ "ಉತ್ತರಿಸಲ್ಪಟ್ಟ ಪ್ರಾರ್ಥನೆಗಳು" ನಮ್ಮ ಜೀವಿತಗಳನ್ನು ಜಟಿಲಗೊಳಿಸುತ್ತವೆ. ನಮ್ಮ ಜೀವಿತಗಳನ್ನು ಹೆಚ್ಚು ಉತ್ತಮವಾಗಿ ಮಾಡುವವೆಂದು ನಾವು ಭರವಸೆ ಹೊಂದಿದ ಸಂಗತಿಯು ಅವುಗಳನ್ನು ಹೆಚ್ಚು ಕಠಿಣವಾದದ್ದನ್ನಾಗಿ ಮಾಡಬಹುದು. ಉದಾಹರಣೆಯಾಗಿ, ಲಾಟರಿಯನ್ನು ಗೆಲ್ಲುವ ಜನರನ್ನು ತೆಗೆದು ಕೊಳ್ಳಿರಿ. ಕೆಲವು ವರ್ಷಗಳ ಹಿಂದೆ, *ನ್ಯೂಯಾರ್ಕ್ ಟೈಮ್ಸ್ ಸಂಡೇ ಮ್ಯಾಗ್ ಜೀನ್*[1] ಲಾಟರಿಯನ್ನು ಜಯಿಸುವವರ ಬಗ್ಗೆ ಮತ್ತು ಗೆದ್ದು ಕೊಂಡ ಲಾಟರಿಯು ಅವರ ಜೀವಿತಗಳ ಮೇಲೆ ಹೇಗೆ ಪರಿಣಾಮ ಮಾಡಿತು ಎಂಬುದರ ಬಗ್ಗೆ ಒಂದು ಕಥೆಯನ್ನು ಪ್ರಕಟಿಸಿತು. ಈ ಜನರು ಲಾಟರಿಯನ್ನು ಗೆಲ್ಲುವುದು ಒಂದು ಮಿಶ್ರಿತ ಆಶೀರ್ವಾದವೆಂದು ತಿಳಿದರೆಂಬುದನ್ನು ಅವರು ಕಂಡುಕೊಂಡರು. ಹಣವು ಅವರಿಗೆ ಚೆನ್ನಾದ ಮನೆಗಳನ್ನು ಮತ್ತು ಕಾರುಗಳನ್ನು, ಕೊಂಡು ಕೊಳ್ಳಲು ಸಹಾಯ ಮಾಡಿತು, ಆದರೆ ಅದು ಅನಿರೀಕ್ಷಿತವಾದ ಸಮಸ್ಯೆಗಳನ್ನೂ ಸಹ ಅವರಿಗೆ ತಂದಿತು.

ಹೆಚ್ಚಾದ ಲಾಟರಿ ವಿಜಯ ಶಾಲಿಗಳು ಬೇಗನೇ ಸಾಲದ ಅವಶ್ಯಕತೆಯಿದ್ದ ತಾವು ಹಿಂದೆ ಕಳೆದು ಕೊಂಡಿದ್ದ ಬಂಧುಗಳಿಂದ ಬರಬಹುದಾದ ಕರೆಗಳನ್ನು ಪ್ರತಿಬಂಧಿಸಲು ಹಣದ ಕೊರತೆಯುಳ್ಳ ಕಠಿಣವಾದ ಸ್ಥಿತಿಯ ಕಥೆಯುಳ್ಳವರ ಹಣವನ್ನು ಕಾದಿರಿಸಲು ಸಲಹೆಕೊಡುವವರ ಫೋನ್ ನಂಬರುಗಳನ್ನು ಯಾದಿ ಮಾಡಿಕೊಂಡರು. ಒಬ್ಬ ಪ್ರತ್ಯೇಕ ವಾದ ವ್ಯಕ್ತಿ, ಡೊನಾಲ್ಡ್ ಬ್ಲೇಕ್ಲಿ ಎಂಬವನು, ಒಬ್ಬ ಎಲೆಕ್ಟ್ರಿಕಲ್ ಎಂಜಿನೀಯರ್‌ನು 1982ರಲ್ಲಿ 4.2 ಮಿಲಿಯನ್ ಯು.ಎಸ್. ಡಾಲರುಗಳನ್ನು ಗೆದ್ದು ಕೊಂಡನು. ಐಶ್ವರ್ಯದ ಬಗ್ಗೆ ಅವನು ಆನಂದಿಸಿದರೂ ಹಣವು ತನ್ನ ಸಂಬಂಧಗಳನ್ನು ಬದಲಾಯಿಸಿದ ರೀತಿಗಾಗಿ ದುಃಖಪಟ್ಟನು. ಬ್ಲೇಕ್ಲಿಗೆ 2,000 ಡಾಲರು ಸಾಲಕೊಡ ಬೇಕಾಗಿದ್ದ ಒಬ್ಬ ಸ್ನೇಹಿತನಿಗೆ ಸಾಲ ಹಿಂದಿರುಗಿ ಕೊಡಬೇಕೆಂದು ಕೇಳಿದಾಗ ಅವನು ಅವನ ಕಡೆಗೆ ತಿರಸ್ಕಾರದಿಂದ ನೋಡುವವನಾದನು. "4.2 ಮಿಲಿಯನ್ ಯು.ಎಸ್. ಡಾಲರುಗಳನ್ನು ಹೊಂದಿಕೊಂಡಿದ್ದನು ಸಣ್ಣ ಮೊತ್ತವಾದ 2,000 ಯು.ಎಸ್ ಡಾಲರುಗಳ ಬಗ್ಗೆ ಯಾಕೆ ಆಸಕ್ತಿವಹಿಸಬೇಕು?" ಎಂದು ಅವನು ಆಶ್ಚರ್ಯಪಟ್ಟನು. "ಹಣವನ್ನು ಕಳೆದು ಕೊಳ್ಳುವದಕ್ಕೆ ನನಗೆ ಕೆಟ್ಟದ್ದೆನಿಸುತ್ತದೆ, ಆದರೆ ಒಬ್ಬ ಸ್ನೇಹಿತರನ್ನು ಕಳೆದು ಕೊಳ್ಳುವುದು ಇನ್ನೂ ಅತೀ ಕೆಟ್ಟದ್ದಾಗಿ ನಾನು ಭಾವಿಸುತ್ತೇನೆ" ಎಂದು ಬ್ಲೇಕ್ಲಿ ಹೇಳಿ ದನು. ತನ್ನ ಜೊತೆ ಕೆಲಸದವರು ಮೊದಲು ತಾನು ಗೆದ್ದುಕೊಂಡದ್ದಕ್ಕೆ ಉತ್ತೇಜಿತರಾಗಿದ್ದರು ಎಂದು ಹೇಳುತ್ತಾ ಅವನು ಹೋದನು. ಆರು ತಿಂಗಳುಗಳ ನಂತರ, ಅವರ ಉತ್ತೇಜನವು ಅಸೂಯೆಯಾಗಿ ಮಾರ್ಪಟ ಹೊಂದಿತು. ಮತ್ತು ಅಂತಿಮವಾಗಿ ಬ್ಲೇಕ್ಲಿಯು ತನ್ನ ಕೆಲಸವನ್ನು ಬಿಟ್ಟು ಹೋಗಬೇಕಾಯಿತು. ಕೆಲವು ಸಲ "ಉತ್ತರಿಸಲ್ಪಟ್ಟ ಪ್ರಾರ್ಥನೆಯು" ಜೀವಿತವನ್ನು ಗೊಂದಲಕ್ಕೆ ಗುರಿಪಡಿಸಬಹುದು.

ಕುರುಡನಾಗಿ ಹುಟ್ಟಿದ ಮನುಷ್ಯನನ್ನು ಯೇಸುವು ಸಂದರ್ಶಿಸಿದ ದಿನವು ಆ ಮನುಷ್ಯನ ಜೀವಿತದಲ್ಲಿ ಅತೀ ಅದ್ಭುತವಾದ ದಿನವಾಗಿತ್ತು. ಪ್ರತಿಯೊಬ್ಬ ಕುರುಡು ವ್ಯಕ್ತಿಯು ದೃಷ್ಟಿಗಾಗಿ ಪ್ರಾರ್ಥಿಸುತ್ತಾನೆ. ಸಂಶಯವಿಲ್ಲದೇ, ಈ ಮನುಷ್ಯನು ತಾನು ನೋಡುವ ಶಕ್ತನಾಗಿದ್ದರೆ ತಾನು ಏನು ಮಾಡಬಹುದು ಎಂಬುದರ ಬಗ್ಗೆ ಆಗಾಗ ಕನಸು ಕಂಡಿರಬಹುದು ಆಗ ಒಂದು ದಿನ,

ಯಾವುದೇ ಮುನ್ನೆಚ್ಚರಿಕೆ ಕೊಡದೇ, ಆ ಮನುಷ್ಯನು ಅವನ ಬಳಿಗೆ ನಡೆದು ಬಂದನು ಮತ್ತು ಪ್ರತಿಯೊಂದನ್ನು ಬದಲಾಯಿಸಿದನು. ಯೇಸುವು ತನ್ನ ಸ್ವಂತ ಉಗುಳಿನಿಂದ ಮತ್ತು ನೆಲದ ಮಣ್ಣಿನಿಂದ ಕೆಸರು ಮಾಡಿ, ಅದನ್ನು ಮನುಷ್ಯನ ಕಣ್ಣುಗಳ ಮೇಲೆ ಹಚ್ಚಿದನು, ಮತ್ತು ಅವನಿಗೆ ಹೋಗಿ, ಸಿಲೋವ ಕೊಳದಲ್ಲಿ ತೊಳೆದು ಕೊಳ್ಳಲು ಹೇಳಿದನು (9:6). "ಅವನು ಹೋಗಿ ತೊಳಕೊಂಡು ಕಣ್ಣು ಹೊಂದಿದವನಾಗಿ ಬಂದನು" (9:7ಬಿ) ಎಂದು ಯೋಹಾನನು ವರದಿ ಮಾಡಿದನು. ಕುರುಡು ಮನುಷ್ಯನ, ಅತೀ ದೊಡ್ಡ ಪ್ರಾರ್ಥನೆಯು ಉತ್ತರಿಸಲ್ಪಟ್ಟಿತು! ಇದು ಅವನ ಜೀವಿತದಲ್ಲಿ ಅತೀ ಕಠಿಣವಾದ ದಿನದ ಪ್ರಾರಂಭವೆಂದು ಅವನು ಗ್ರಹಿಸಿಕೊಳ್ಳಲಿಲ್ಲ.

ಈ ಪಾಠಕ್ಕಾಗಿ ನಮ್ಮ ಪಠ್ಯವು, 9:6-41; ನಂಬಿಕೆಗೆ ಮಾರ್ಗದ ಮೇಲಿದ್ದ ಒಬ್ಬ ಮನುಷ್ಯನ ಕಥೆಗೆ ಸಂಬಂಧಿಸಿರುತ್ತದೆ. ಯೇಸುವು ಕಥೆಯನ್ನು ಚಲನೆಯಲ್ಲಿಟ್ಟಾಗ ಮತ್ತು ಅಂತ್ಯದಲ್ಲಿ ಅದಕ್ಕೆ ಅಂತಿಮ ದಿಶೆಯನ್ನು ಮತ್ತು ವಿವರಣೆಯನ್ನು ಕೊಡಲಿಕ್ಕೆ ಹಿಂದಿರುಗಿದಾಗ, ವಿವರಣೆಯು ಒಮ್ಮೆ ಕುರುಡನಾಗಿದ್ದ ಮನುಷ್ಯನ ಹಾಗೂ ಯೇಸುವಿನಲ್ಲಿ ನಂಬಿಕೆಯ ಅವನ ಪ್ರಯಾಣದ ಕಡೆಗೆ ಬೆಳಕನ್ನು ಚೆಲ್ಲುತ್ತದೆ. ಆಶ್ಚರ್ಯಕರವಾದ ರೀತಿಯಲ್ಲಿ, ವಾಕ್ಯಭಾಗವು ಎಂದಿಗೂ ವೃದ್ಧಿಕೊಳ್ಳುವ ನಂಬಿಕೆಯ ಆ ಮನುಷ್ಯನ ಹೇಳಿಕೆಗಳಿಂದ ಚೆನ್ನಾಗಿ ಇಡಲ್ಪಟ್ಟಿದೆ.

## "ನಾನೇ ಅವನು" (9:6-9)

ಆ ಮನುಷ್ಯನು ತನ್ನ ಕುರುಡತನದಿಂದ ಸ್ವಸ್ಥತೆ ಹೊಂದಿದ ಕೂಡಲೇ, ಅವನ ನೆರೆಹೊರೆಯವರು ಈ ನಂಬಲಾಗದ ಸಂಭವಿಸುವಿಕೆಯ ಬಗ್ಗೆ ಚರ್ಚಿಸಲು ಪ್ರಾರಂಭಿಸಿದರು. ಕೆಲವರು, "ಇವನು ಕೂತಿದ್ದ ಆ ಭಿಕ್ಷುಕನಲ್ಲವೇ?" ಎಂದು ಪ್ರಶ್ನಿಸಿದರು (9:8). ಕೆಲವರು "ಹೌದು, ಅವನೇ" ಇನ್ನೂ ಕೆಲವರು, "ಅವನಲ್ಲ, ಅವನ ಹಾಗಿದ್ದಾನೆ" ಅಂದರು (9:9). ಅವರ ಚರ್ಚೆಯು ಒಂದು ಕುಟುಂಬದವರು ತಮಗೆ ಪ್ರಿಯರಾಗಿದ್ದವರಲ್ಲಿ ಒಬ್ಬನು ಆಸ್ಪತ್ರೆಯಲ್ಲಿ ರೋಗಿಯಾಗಿದ್ದಾಗ, ಆ ರೋಗಿಯನ್ನು ಅಲಕ್ಷಿಸಿ ಅವನ ಎದುರಿನಲ್ಲಿಯೇ, "ಅವನು ಈಗ ಹೇಗಿರುತ್ತಾನೆ?" "ಬಹುಶಃ ಅವನು ಇಂದು ಸ್ವಲ್ಪ ಚೆನ್ನಾಗಿರುವಂತೆ ಕಾಣುತ್ತಾನೆ" "ಅದರ ಬಗ್ಗೆ ನನಗೆ ನಿಶ್ಚಿತತೆ ಇರುವದಿಲ್ಲ. ಇಂದು ಅವನು ಅಷ್ಟು ಚೆನ್ನಾಗಿ ಕಾಣುತ್ತಿರುವದಿಲ್ಲ." "ಡಾಕ್ಟರು ಏನು ಹೇಳಿದರು?" "ಅವನು ಉಳಿಯ ಬಹುದೆಂದು ನೀನು ಯೋಚಿಸುವೆಯೋ?" ಎಂಬ ರೀತಿಯಲ್ಲಿ ಇತ್ತು.

ಅಂತಿಮವಾಗಿ, ಗುಣಹೊಂದಿದ ಮನುಷ್ಯನು ತನ್ನ ಬಗ್ಗೆ, "ನಾನೇ ಅವನು" (9:9) ಎಂದು ಹೇಳಿದನು. ಅವನು ತನ್ನನ್ನು ಕಡೆಗಣಿಸಲ್ಪಡಲು ಬಿಡಲಿಲ್ಲ. ಅನೇಕ ವರ್ಷಗಳಿಂದ ಅವನು ಕುರುಡು ಭಿಕ್ಷುಕನಾಗಿದ್ದರೂ, ಅವನು ಕೆಲವು ವಿಷಯಗಳಲ್ಲಿ ಪರಿಣಿತನಾಗಿದ್ದನು, ಮತ್ತು ಅವುಗಳಲ್ಲಿ ಒಂದು ತಾನೇ ಆಗಿದ್ದನು! ತಾನು ಕುರುಡನಾಗಿದ್ದೇನೆಂಬುದನ್ನು ಮತ್ತು ಈಗ ತಾನು ನೋಡ ಬಲ್ಲೆನು ಎಂಬುದರ ಬಗ್ಗೆ ನಿಶ್ಚಿತತೆಯುಳ್ಳವನಾಗಿದ್ದನು. ಆದುದರಿಂದ ಅವನು ಭರವಸೆಯಿಂದ, ತಾನು ತಿಳಿದದ್ದು ಸತ್ಯವೆಂದು ಹೇಳಿದನು: "ನಾನೇ ಅವನು!"

ನಮ್ಮೊಬ್ಬರಿಗಾಗಿ ವಿಶ್ವಾಸದ ಪಯಣವು ವ್ಯಕ್ತಿಗಳಂತೆ ನಮ್ಮ ಬಗ್ಗೆ ನಮ್ಮ ತಿಳುವಳಿಕೆಯಿಂದ ಚೆನ್ನಾಗಿ ಪ್ರಾರಂಭವಾಗುತ್ತದೆ. ನಿಮ್ಮ ಮೇಲೆ ನೀವು ಅಧಿಕೃತವಾಗಿರುವಿರಿ. ನೀವು ಒಬ್ಬ ವ್ಯಕ್ತಿಯಾಗಿರುವಿರಿ ಮತ್ತು ಒಂದು ಜೀವಿಸುವ ಪ್ರಾಣವಾಗಿರುವಿರಿ ಎಂಬ ನಿಶ್ಚಿತತೆಯಿರುವುದು. ವಿಜ್ಞಾನಿಗಳು ನಿಮ್ಮ ಬಗ್ಗೆ ಒಂದು ಸಂಗತಿಯನ್ನು ಹೇಳಬಹುದು. ನಿಮ್ಮ ಯಜಮಾನನು ನಿಮಗೆ ಇನ್ನೊಂದನ್ನು ಹೇಳಬಹುದು, ಮತ್ತು ನಿಮ್ಮ ಕುಟುಂಬ ಮತ್ತೊಂದನ್ನು ಹೇಳಬಹುದು ಹಾಗಿದ್ದರೂ, ನೀವು ಜೀವಿತರಾಗುವಿರೆಂದೂ ನೀವು ಆತ್ಮಿಕ ಜೀವಿಯಾಗಿರುವಿರೆಂದೂ ಮತ್ತು ಸಂಪೂರ್ಣತೆಯಲ್ಲಿ ನೀವಿನ್ನೂ ಹೊಂದಿಕೊಳ್ಳದೇ ಇರುವದಕ್ಕಾಗಿ ಹುಡುಕುತ್ತಿರುವಿರೆಂದೂ ತಿಳಿದಿರುವಿರಿ. "ನಾನೇ ಅವನು" ಎಂದು ವಿಶ್ವಾಸದ ಮಾರ್ಗವನ್ನು ಪ್ರಾರಂಭಿಸುವಂತೆ ಘೋಷಿಸುವೆವು.

## "ಯೇಸು ಕೆಸರನ್ನು ಮಾಡಿದನು" (9:10-12)

ಅವರೆಲ್ಲರೂ ದೇವಾಲಯದ ಬಳಿಯಲ್ಲಿ ನೋಡಿದ್ದ ಕುರುಡು ಭಿಕ್ಷುಕ ತಾನಾಗಿದ್ದೇನೆಂದು ಹೇಳಿದ ಹೇಳಿಕೆಯು ಅದ್ಭುತ ಕಾರ್ಯದಿಂದ ಪ್ರಾರಂಭಿಸಲ್ಪಟ್ಟ ಗಲಿಬಿಲಿಯ ಸ್ಪಷ್ಟವಾಗಲಿಲ್ಲ. ಈ ಒಗಟಿನಲ್ಲಿ ತುಂಡುಗಳು ಅವರ ಮನಸ್ಸುಗಳಲ್ಲಿ ಯೋಗ್ಯವಾಗಿ ಒಂದಕ್ಕೊಂದು ಹೊಂದಿಕೊಳ್ಳಲಿಲ್ಲ. ಯಾವುದೇ ದಿನದಂದು ಇಲ್ಲವೇ ಪ್ರತಿದಿನ ಇಂಥ ಅದ್ಭುತಕಾರ್ಯಗಳು ನಡೆಯುವದನ್ನು ಅವರು ನೋಡಿರಲಿಲ್ಲ ಈ ಆಶ್ಚರ್ಯಕರವಾದ ಸಂಗತಿಗಳು ಹೇಗೆ ಸಂಭವಿಸಿತೆಂದು ಅವರು ಕೇಳಿದರು. ಸರಳವಾದ ಮತ್ತು ನೇರವಾದ ರೀತಿಯಲ್ಲಿ ಅವನು ತನ್ನ ಕಥೆಯನ್ನು ಹೇಳಿದನು: "ಯೇಸು ಎಂಬವನಿದ್ದಾನಲ್ಲಾ, ಅವನು ಕೆಸರು ಮಾಡಿ ನನ್ನ ಕಣ್ಣಿಗೆ ಹಚ್ಚಿ ಸಿಲೋವ ಕೊಳಕ್ಕೆ ಹೋಗಿ ತೊಳಕೋ ಎಂದು ಹೇಳಿದನು; ನಾನು ಹೋಗಿ ತೊಳಕೊಂಡೆನು; ಕಣ್ಣು ಬಂದವು" (9:11).

ಪುನಃ, ಸಮಾಜದಲ್ಲಿ ಸ್ಥಾನವಿಲ್ಲದವನು ಮತ್ತು ಐಶ್ವರ್ಯವಿಲ್ಲದವನು ಕೆಲವೊಂದು ವಿಷಯಗಳ ಮೇಲೆ ಜಗತ್ತಿನ ಅತೀ ಪ್ರತಿಭಾವಂತನೆಂದು ಪ್ರದರ್ಶಿಸಿಕೊಂಡನು. ತಾನು ಯಾರಾಗಿದ್ದೆನೆಂದು ಮತ್ತು ತಾನು ಏನನ್ನು ಅನುಭವಿಸಿದ್ದೆನೆಂದು ಬಲ್ಲವನಾಗಿದ್ದನು. ಅದೇ ರೀತಿಯಲ್ಲಿ, ವಿಶ್ವಾಸದ ಪಯಣದಲ್ಲಿರುವ ಎಲ್ಲರೂ ತಮ್ಮ ಸ್ವಂತ ಜೀವಿತಗಳಲ್ಲಿ ಪರಿಣಿತರಾಗಿದ್ದಾರೆ. "ಯೇಸುವನ್ನು ಸಂದರ್ಶಿಸುವ ಮೊದಲು ನಾನು ದ್ವೇಷಿಸುವವನಾಗಿದ್ದೆನು" ಎಂದು ಒಬ್ಬನು ಹೇಳಿದನು. "ಯೇಸುವು ನನ್ನನ್ನು ವಿಮೋಚಿಸುವ ಮೊದಲು ನಿಯಂತ್ರಣವಿಲ್ಲದವನಾಗಿದ್ದೆನು ಇಲ್ಲವೇ ನಿರಾಶೆಯಲ್ಲಿದ್ದೆನು ಅಥವಾ ಕುರುಡನಾಗಿದ್ದೆನು" ಎಂದು ಇತರರು ಹೇಳಬಹುದು. ಅಂಥ ವಿಷಯಗಳ ಬಗ್ಗೆ ನೀನು ದೊಡ್ಡ ದೃಢತೆಯಿಂದ ಮಾತಾಡಬಹುದು. ಯಾಕಂದರೆ ನೀನು ಯಾರಾಗಿದ್ದೀ ಮತ್ತು ನಿನ್ನ ಜೀವಿತದಲ್ಲಿ ಯೇಸುವು ಏನು ಮಾಡಿದ್ದಾನೆ ಎಂಬುದರ ಮೇಲೆ ನೀನು ಮಾತ್ರವೇ ಅಧಿಕೃತ ವ್ಯಕ್ತಿಯಾಗಿರುತ್ತೀ ಅದನ್ನು ನಿನ್ನಿಂದ ಯಾರೂ ತೆಗೆದುಕೊಳ್ಳಲಾರರು!

## "ಆತನು ಒಬ್ಬ ಪ್ರವಾದಿ" (9:13-17)

ಇನ್ನೂ, ಕುರುಡನಾಗಿ ಹುಟ್ಟಿದ ಮನುಷ್ಯನಿಗೆ ಏನು ಸಂಭವಿಸಿತು ಎಂಬುದರ ಬಗ್ಗೆ, ಅವನಿಗೆ ಪರಿಚಿತಿಯುಳ್ಳ ಜನರಿಗೆ ಅರ್ಥವಾಗದೇ ಇದ್ದಾಗ, ಅವರು ಧಾರ್ಮಿಕ ಪರಿಣಿತರನ್ನು, ಫರಿಸಾಯರನ್ನು ಕರೆದುಕೊಂಡು ಬಂದರು. ಯೇಸುವು ಆ ಮನುಷ್ಯನನ್ನು ಗುಣಪಡಿಸಿದ ದಿನವು ಸಬ್ಬತ್ತದಿನ, ಯೆಹೂದ್ಯರ ವಿಶ್ರಾಂತಿಯ ಪರಿಶುದ್ಧ ದಿನವಾಗಿತ್ತು. ಇದು ಒಂದು ದೊಡ್ಡ ತೊಂದರೆಯನ್ನುಂಟುಮಾಡಿತು. ಸಬ್ಬತ್‌ದಿನದಂದು ಯಾವುದೇ ಗುಣಪಡಿಸುವಿಕೆಯ ಬಗ್ಗೆ ಅವರು ಸಂಶಯವುಳ್ಳವರಾಗಿ, ತನ್ನ ಕಥೆಯನ್ನು ಪುನಃ ಹೇಳಬೇಕೆಂದು ಆ ಮನುಷ್ಯನನ್ನು ಕೇಳಿಕೊಂಡರು. ಅವನು ಹೇಳಿದಾಗ ಅವರು, "ಈ ಮನುಷ್ಯನು ದೇವರಿಂದ ಬಂದವನಲ್ಲ; ಅವನು ಸಬ್ಬತ್ ದಿವಸವನ್ನು ಲಕ್ಷ್ಯ ಮಾಡುವದಿಲ್ಲವಲ್ಲಾ" ಎಂದು ತೀರ್ಮಾನಿಸಿದರು (9:16). ಗುಣಪಡಿಸುವಿಕೆಯನ್ನು ಒಂದು ಕುತೂಹಲದಂತೆ ದೃಷ್ಟಿಸಿದ ಫರಿಸಾಯರ ಮನಸ್ಸಿನಲ್ಲಿ ಈ ವಿಷಯವು ಮುಗಿದದ್ದಾಗಿತ್ತು. ಹೀಗಿದ್ದರೂ ಆ ಮನುಷ್ಯನೊಂದಿಗೆ ಪರಿಚಯವಿದ್ದ ಜನರು ಫರಿಸಾಯರ ಉತ್ತರದಿಂದ ತೃಪ್ತರಾಗಲಿಲ್ಲ. ಅವನು ದೇವರಿಂದ ಬಂದವನಾಗಿರದೇ ಇದ್ದರೆ ಅಂಥವನು ಅಂಥ ಅಗಾಧವಾದ ಅದ್ಭುತಕಾರ್ಯವನ್ನು ಹೇಗೆ ಮಾಡಬಲ್ಲನು ಎಂದು ಆಶ್ಚರ್ಯಬರಿತರಾದರು.

ಜನರು ಚರ್ಚಿಸುವದನ್ನು ಮುಂದರಿಸಿದಂತೆ, "ಅದರಲ್ಲಿ ಭೇದವಾಯಿತು" (9:16). ಯೋಹಾನನ ಸುವಾರ್ತೆಯಲ್ಲೆಲ್ಲಾ ಯೇಸುವು ಸತತವಾಗಿ ತನ್ನ ಬಗ್ಗೆ ಜನರು ನಿರ್ಣಯ ಮಾಡುವಂತೆ ದೂರುವದನ್ನು ನಾವು ನೋಡುತ್ತೇವೆ. ಜನರು ತನ್ನನ್ನು ಕಡೆಗಣಿಸುವದರ ಬಗ್ಗೆ ಯೇಸುವು ತೃಪ್ತನಾಗದೇ, ಅವರು ಪುರಾವೆಯನ್ನು ಯೋಚಿಸಿ, ತಾನು ದೇವರಿಂದ

ಬಂದವನೋ, ಇಲ್ಲವೇ ಪಿಶಾಚನಿಂದ ಬಂದವನೋ ಎಂಬುದನ್ನು ತೀರ್ಮಾನಿಸುವಂತೆ ಯೇಸುವು ಒತ್ತಾಯಿಸಿದನು. ಯೇಸು ಮತ್ತು ಯೋಹಾನರು ಸಂಬಂಧಿಸಿದಂತೆ, ಮಧ್ಯ ಸ್ಥಳವಿರುವುದೇ ಇಲ್ಲ.

ತಮ್ಮ ನಿರಾಶೆಯಲ್ಲಿ, ಜನರು ಆ ಮನುಷ್ಯನ ಕಡೆಗೆ ತಿರುಗಿಕೊಂಡು ಈ ವಿಷಯದ ಬಗ್ಗೆ ಏನು ಹೇಳುತ್ತಾನೆಂದು ಕೇಳಿದರು. ನಂಬಿಕೆಯ ಕಡೆಗೆ ಇನ್ನೊಂದು ಮಹತ್ವದ ಹೆಜ್ಜೆಯಲ್ಲಿಟ್ಟು, ಅವನು, "ಆತನು ಪ್ರವಾದಿ ಅನ್ನುತ್ತೇನೆ" (9:17) ಎಂದು ಉತ್ತರ ಕೊಟ್ಟನು. ಇದನ್ನು ಹೇಳು ವಲ್ಲಿ ಹಿಂದೆ ಭಿಕ್ಷುಕನಾಗಿದ್ದವನು - ತನ್ನ ಬಗ್ಗೆ ಅಲ್ಲ, ಆದರೆ ತನ್ನನ್ನು ಸ್ವಸ್ಥಪಡಿಸಿದ ಮನುಷ್ಯನ ಬಗ್ಗೆ ಒಂದು ಅರಿಕೆಯನ್ನು ಮಾಡಿದನು. ಅವನ ತೀರ್ಮಾನವು ಈ ಮನುಷ್ಯನು ತನ್ನ ಬಲವನ್ನು ದೇವರಿಂದ ಹೊಂದಿದ್ದಾನೆ ಎಂಬುದಾಗಿತ್ತು. ಯೇಸುವು ಹೇಗೆ ಕೆಟ್ಟವನೆಂದು ಫರಿಸಾಯರು ಹೇಳಿದರೂ, ಕುರುಡನಾಗಿ ಹುಟ್ಟಿದ್ದವನು ಯೇಸುವು ಒಳ್ಳೆಯವನೆಂದೂ ಆತನ ಬಲವು ದೇವರಿಂದ ಬಂದೀತು ಎಂದೂ ದೃಢವಾಗಿ ನಂಬಿದ್ದನು.

## "ಒಂದು ಮಾತ್ರ ಬಲ್ಲೆ" (9:18-25)

ಕುರುಡನಾಗಿ ಹುಟ್ಟಿದವನ ಪ್ರತಿಯೊಂದು ಹೇಳಿಕೆಯಿಂದ, ಉದ್ವೇಗವು ಬೆಳೆಯಿತು. ಯೇಸುವು ದೇವರಿಂದ ಬಂದ ಪ್ರವಾದಿ ಎಂಬ ಅವನ ನಂಬಿಕೆಯನ್ನು ಫರಿಸಾಯರು ಸಂಪೂರ್ಣವಾಗಿ ತಿರಸ್ಕರಿಸಿದರು. ಕೆಲವರು ಇವನು ಇಲ್ಲಿ ಕುಳಿತು ಕೊಂಡು ಭಿಕ್ಷೆ ಬೇಡು ತ್ತಿದ್ದ ಮನುಷ್ಯನೋ ಎಂಬುದರ ಬಗ್ಗೆ ಸಂಶಯ ವ್ಯಕ್ತಪಡಿಸಿದರು. ಆದುದರಿಂದ, ಅವರು ಅವನ ತಂದೆತಾಯಿಗಳನ್ನು ಕರೆಯಿಸಿ ಅವರನ್ನು ಪ್ರಶ್ನಿಸಿದರು. "ಕುರುಡನಾಗಿ ಹುಟ್ಟಿದನೆಂದು ನೀವು ಹೇಳುವಂಥ ನಿಮ್ಮ ಮಗನು ಇವನೋ? ಈಗ ಇವನಿಗೆ ಕಣ್ಣು ಹೇಗೆ ಬಂದವು?" (9:19). ಆ ಮನುಷ್ಯನ ತಂದೆ ತಾಯಿಗಳು ಭಯಗೊಂಡರು. ಯೇಸುವಿನ ಬಗ್ಗೆ ಸಕಾರಾ ತ್ಮಕವಾಗಿ ಯಾರಾದರೂ ಹೇಳಿದರೆ ಅವರಿಗೆ ಬಹಿಷ್ಕಾರ ಹಾಕಬೇಕೆಂದು ಭಯಪಡಿಸಿದ್ದರ ಬಗ್ಗೆ ಅವರು ತಿಳಿದುಕೊಂಡಿದ್ದರು (9:22). ತಾವು ತಮ್ಮ ಸ್ನೇಹಿತರನ್ನು, ಕುಟುಂಬವನ್ನು ಮತ್ತು ಉಪಜೀವನವನ್ನು ಕಳೆದು ಕೊಳ್ಳುವೆವೆಂಬ ಭಯದಿಂದ ಈ ತಂದೆ, ತಾಯಿಗಳು (ಭಿಕ್ಷೆ ಬೇಡುವ ಜೀವಿತಕ್ಕೆ ತಮ್ಮ ಮಗನನ್ನು ತಳ್ಳಿಬಿಡುವರು) ಮತ್ತೊಮ್ಮೆ ಈ ಹೋರಾಟದಲ್ಲಿ ಅವನನ್ನು ತಳ್ಳಿಬಿಟ್ಟರು. "ಇವನನ್ನೇ ಕೇಳಿರಿ; ಪ್ರಾಯದವನಾಗಿದ್ದಾನಲ್ಲಾ; ಇವನೇ ತನ್ನ ವಿಷಯವಾಗಿ ಹೇಳುವನು ಎಂದು ಉತ್ತರ ಕೊಟ್ಟರು" (9:21). ಇದು ಅವರಿಗೆ ಅತ್ಯಂತ ಸಂತೋಷದ ದಿನವಾಗಿರಬೇಕಾಗಿತ್ತು ಯಾಕಂದರೆ ಅವರ ಮಗನಿಗೆ ದೃಷ್ಟಿಯ ವರ ದೊರಕ್ಕಿತ್ತು. ಅದರ ಬದಲು ಅದು ಭಯಾನಕತೆಯು ಮತ್ತು ನಾಚಿಕೆಯ ದಿನವಾಗಿತ್ತು.

ಪುನಃ ಪ್ರಶ್ನಿಸುವವರು, ಆ ಮನುಷ್ಯನ ಕಡೆಗೆ ತಿರುಗಿ ಅವನು ನೋಡುವಂತಾಯಿತು ಎಂಬುದನ್ನು ವಿವರಿಸಬೇಕೆಂದು ಕೇಳಿದರು. "ದೇವರಿಗೆ ಮಾನ ಬರುವಂತೆ ಹೇಳು" ಎಂದರು. ಈ ವ್ಯಕ್ತಪಡಿಸುವಿಕೆಗೆ ದೇವರ ಆರಾಧನೆಯಾಗಲೀ, ಇಲ್ಲವೇ ಸ್ತುತಿಸುವದಾಗಲೀ ಸಂಬಂಧಸಿರಲಿಲ್ಲ. ಅದರ ಬದಲು "ಸತ್ಯವನ್ನು ಹೇಳು" ಎಂದು ಯೆಹೂದ್ಯರು ಹೇಳುವ ಮಾರ್ಗವಾಗಿತ್ತು.[2] ಒಬ್ಬನು ಅಪರಾಧ ಮಾಡಿದ್ದಾನೆಂದು ಎಲ್ಲರಿಗೂ ತಿಳಿದಿದ್ದರೂ ಅವನು ಇನ್ನೂ ಅರಿಕೆ ಮಾಡಿದ್ದಾಗ ಅಂಥ ಅಪರಾಧಿಯೊಂದಿಗೆ ಮಾತಾಡುವ ವಿಧಾನ ಅದಾಗಿತ್ತು. ಅವರ ಮಾತುಗಳು ಬೆಳೆಯುತ್ತಿದ್ದ ನಿರಾಶೆಯನ್ನು ಕೋಪವನ್ನು ಕುರುಡನಾಗಿ ಹುಟ್ಟಿದ್ದ ಆ ಮನುಷ್ಯನೊಂದಿಗೆ ತಾಳ್ಮೆಯಿಲ್ಲದ್ದನ್ನೂ ತೋರಿಸುತ್ತವೆ.

ನಾವು ಮೊದಲು ನೋಡಿದಂತೆ, ಆ ಮನುಷ್ಯನು ತನಗೆ ಪ್ರಶ್ನೆಮಾಡಿದವರಿಗೆ ಉತ್ತರ ಕೊಟ್ಟಾಗ, ಅವನು ಸಮಾಧಾನದಿಂದ, ನಿಶ್ಚಿತವಾದ ಭರವಸೆಯಿಂದ ಹಾಗೆ ಮಾಡಿದನು. "ಆತನು ಭಕ್ತಿಹೀನನೋ ಏನೋ ನಾನರಿಯೆ, ಒಂದು ಮಾತ್ರ ಬಲ್ಲೆ, ಕುರುಡನಾಗಿದ್ದೆನು, ಈಗ ಕಣ್ಣು ಕಾಣುತ್ತವೆ" (9:25) ಎಂದು ಉತ್ತರ ಕೊಟ್ಟನು. ಧಾರ್ಮಿಕ ಚರ್ಚೆಯ

ಅನೇಕ ಕ್ಷೇತ್ರಗಳಲ್ಲಿ, ತನ್ನ ಬಗ್ಗೆ ಅವನು ಸಾಧಿಸಿಕೊಳ್ಳಲಾರದವನಾಗಿರ ಬಹುದು. ಅವನು ಭಯಪಡಿಸಲ್ಪಟ್ಟಾಗ, ಅವನು ಸತ್ಯಾಂಶಗಳನ್ನು ತಿಳಿದುಕೊಂಡನು: "ಒಂದು ಮಾತ್ರ ಬಲ್ಲೆ, ಕುರುಡನಾಗಿದ್ದೆನು, ಈಗ ಕಣ್ಣು ಕಾಣುತ್ತವೆ."

## "ಈತನು ದೇವರಿಂದ ಬಂದವನು" (9:26-34)

ಕುರುಡನಾಗಿ ಹುಟ್ಟಿದ ಮನುಷ್ಯನ ಹಟಮಾರಿತನದ ದಿಟ್ಟ ಉತ್ತರದಿಂದ ನಿರಾಶೆಗೊಂಡ, ಫರಿಸಾಯರು ಪ್ರಶ್ನಿಸುವ ಇಡೀ ವಿಧಾನವನ್ನು ಮತ್ತೊಮ್ಮೆ ಪ್ರಾರಂಭಿಸಿದರು (9:26). ಅವರ ಯುಕ್ತಿ ಕೌಶಲ್ಯವು ಕೆಲವು ವರ್ಷಗಳ ಹಿಂದೆ ನಾನು ವಿದೇಶಕ್ಕೆ ವಾಯು ಪ್ರಯಾಣ ಮಾಡಿದಾಗ ಎದುರಿಸಿದ ಭಯೋತ್ಪಾದಕ ವಿರೋಧಿ ವಿಧಾನವು ನನ್ನ ಜ್ಞಾಪಕಕ್ಕೆ ತರುತ್ತದೆ. ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ಪ್ರತಿಯೊಬ್ಬ ಪ್ರಯಾಣಿಕರನ್ನು ಸಿಬ್ಬಂದಿಯ ಒಬ್ಬರು ಪ್ರತ್ಯೇಕವಾಗಿ ಪ್ರಶ್ನೆಗಳ ಸರಣಿಯನ್ನು ಕೇಳಿದರು. ಆಗ ಕೆಲವು ನಿಮಿಷಗಳ ನಂತರ ಮತ್ತೊಬ್ಬರು ಅದೇ ಪ್ರಶ್ನೆಗಳನ್ನು ಕೇಳಿದರು! ಅಂತಿಮವಾಗಿ, ಮೂರನೆಯ ವ್ಯಕ್ತಿ ಮತ್ತೊಂದು ಸಲ ಅದೇ ಪ್ರಶ್ನೆಯನ್ನು ಕೇಳಿದನು. ಅನಂತರದಲ್ಲಿ ಆ ಮೂವರು ಒಂದಾಗಿ ನಿಂತು ಕೊಂಡು ಆ ಮೂವರಿಗೂ ನಾವು ಉತ್ತರವನ್ನು ಕೊಟ್ಟಿರುವೆವೋ ಎಂಬುದನ್ನು ತಮ್ಮ ಟಿಪ್ಪಣಿಗಳನ್ನು ಹೋಲಿಸಿಕೊಳ್ಳುತ್ತಿದ್ದುದನ್ನು ನಾವು ನೋಡಿದೆವು. ಕುರುಡನಾಗಿ ಹುಟ್ಟಿದ ಮನುಷ್ಯನಿಗೆ ಆ ದಿನ ನಮಗಾದ ಭಾವನೆಗಳೇ ಆಗಿದ್ದಿರಬೇಕು.

ಪುನಃ ಅದೇ ಪ್ರಶ್ನೆಗಳನ್ನು ಎದುರಿಸುವಲ್ಲಿ, ಆ ಮನುಷ್ಯನು ಪರಿಸ್ಥಿತಿಯೊಳಗೆ ಕೆಲವೊಂದು ವ್ಯಂಗ್ಯವನ್ನು ತೋರಲು ಪ್ರಾರಂಭಿಸಿದನು. ಅವನು ಯೆಹೂದಿ ನಾಯಕರಿಗೆ ಯೇಸುವಿನಲ್ಲಿ ಅವರಿಗೆ ಆಸಕ್ತಿಯಿದ್ದು, ಆತನ ಶಿಷ್ಯರಾಗಲು ಬಯಸುವ ಕಾರಣದಿಂದ ಪುನಃ ಪ್ರಶ್ನೆ ಕೇಳುತ್ತಿರುವಿರೋ ಎಂದು ಕೇಳಿದನು (9:27). ಅವರು ಅದರಿಂದ ಇನ್ನೂ ಹೆಚ್ಚು ಕೋಪವುಳ್ಳವರಾದರು. ಆಗ, ಅವರೊಂದಿಗೆ ಮಾತಾಡುವ ಅಂತಿಮ ಅವಕಾಶದಲ್ಲಿ, ಕುರುಡನಾಗಿ ಹುಟ್ಟಿದ ಮನುಷ್ಯನು, ಇಸ್ರಾಯೇಲಿನಲ್ಲಿ ಅತೀ ಜ್ಞಾನಿಗಳಾದ ಹಾಗೂ ವಿದ್ಯಾವಂತರಾದ ವಿಚಾರಕರಲ್ಲಿ ಕೆಲವರ ಸ್ಥಿರತೆಯಿಲ್ಲದಿರುವಿಕೆಯನ್ನು ತೋರಿಸಿದನು. ಕುರುಡನಾಗಿ ಹುಟ್ಟಿದ ಮನುಷ್ಯನನ್ನು ಸ್ವಸ್ಥಪಡಿಸಿದಂಥ ದೊಡ್ಡ ಅದ್ಭುತ ಕಾರ್ಯದ ಬಗ್ಗೆ ಯಾರೂ ಎಂದು ಕೇಳಿರುವದಿಲ್ಲ ಎಂದು ಅವನು ಹೇಳಿದನು. ಅದು ನಿಜವಾಗಿಯೂ ಆಶ್ಚರ್ಯಕರವಾದ ಕೃತ್ಯವಾಗಿತ್ತು. ನಿಶ್ಚಯವಾಗಿಯೂ ಈ ಅದ್ಭುತ - ಕಾರ್ಯವು ದೇವರಿಂದ ಬಂದಿತು; ಆದಾಗ್ಯೂ ದೇವರಿಗೆ ತಾವು ಬಹಳ ಹತ್ತಿರವಾಗಿರುವೆವೆಂದು ನಂಬಿದ್ದ ಫರಿಸಾಯರಿಗೆ ಯೇಸುವು ಎಲ್ಲಿಂದ ಬಂದಾತನು ಮತ್ತು ಆತನು ಮಾಡಿದ್ದಾನೆ ಎಂಬ ವಿಚಾರವಿರಲಿಲ್ಲ. ಯೇಸುವು ದೇವರಿಂದ ಬಂದವನಾಗಿರದಿದ್ದರೆ, ಅಂಥ ಸಂಗತಿಗಳನ್ನು ಮಾಡಲಿಕ್ಕೆ ಶಕ್ತನಾಗುತ್ತಿರಲಿಲ್ಲ ಎಂಬುದು ಆ ಮನುಷ್ಯನ ಧೈರ್ಯದ ತೀರ್ಮಾನವಾಗಿತ್ತು. ತಿರುಳಿನಲ್ಲಿ, "ಆತನು ದೇವರಿಂದ ಬಂದಾತನು" (9:33) ಎಂದು ಅವನು ಹೇಳಿದನು.

ಕುರುಡನಾಗಿ ಹುಟ್ಟಿದವನಿಂದ ತೊಡಕಿಗೆ ಸಿಕ್ಕಿಕೊಂಡ ಫರಿಸಾಯರು ಇನ್ನೂ ಹೆಚ್ಚು ಕೋಪವುಳ್ಳವರಾದರು. ಅವನು ಅವರಿಗೆ ಬೋಧಿಸಲು ಹೇಗೆ ಧೈರ್ಯಗೊಂಡಿದ್ದಾನೆ? ಅವನು ಧರ್ಮಶಾಸ್ತ್ರದ ಜ್ಞಾನವಿಲ್ಲದವನು ಮತ್ತು ಜವಾಬ್ದಾರಿಕೆಯಿಂದ ಯೋಚಿಸುವನೆಂದು ನಂಬಲಿಕ್ಕಾಗುವದಿಲ್ಲ. ಇದಲ್ಲದೇ, ಅವನು ತನ್ನ ಪಾಪಗಳಲ್ಲಿ ಸಂಪೂರ್ಣವಾಗಿ ಹುಟ್ಟಿದವನಾಗಿದ್ದಾನೆ? ಎಂದು ಅವರು ಹೇಳಿದರು (ವಚನ 2ರಲ್ಲಿ ಪಾಪ ಮತ್ತು ಶ್ರಮೆಯ ಬಗ್ಗೆ ಶಿಷ್ಯರ ಪ್ರಶ್ನೆಯನ್ನು ಜ್ಞಾಪಿಸಿಕೊಳ್ಳಿರಿ). ಅವರು ತಮ್ಮ ಮಾತಿನ ದಾಳಿಯನ್ನು ಮುಗಿಸಿದಾಗ, "ಅವನನ್ನು ಹೊರಗೆ ಹಾಕಿದರು" (9:34). ತಮಗೆ ಏನು ಸಂಭವಿಸಬಹುದೆಂದು ಭಯಪಟ್ಟಿದ್ದರೋ ಅದೇ ಅವನಿಗೆ ಅವರಿಂದ ಮಾಡಲ್ಪಟ್ಟಿತು; ಅವರು ಅವನನ್ನು ಹೊರಗೆ ಹಾಕಿದರು.

ಕುರುಡನಾಗಿ ಹುಟ್ಟಿದ ಮನುಷ್ಯನ ಅನುಭವವು ಯೇಸುವಿನಲ್ಲಿ ನಮ್ಮ ನಂಬಿಕೆಯನ್ನು ಕೆಲವು ಸಲ ನಮ್ಮ ಜೀವಿತಗಳನ್ನು ತೊಂದರೆಗೀಡು ಮಾಡುತ್ತದೆಂದು ನಮ್ಮ ಜ್ಞಾಪಕಕ್ಕೆ ತರುತ್ತದೆ. ಯೇಸುವು ನಮ್ಮ ಜೀವಿತವನ್ನು ಯಾವಾಗಲೂ ಸರಳವಾಗಿ ಮಾಡುತ್ತಾನೆ ಎಂಬ ವಿಚಾರವನ್ನು ನಾವು ಎಲ್ಲಿಂದ ಪಡಕೊಂಡೆವು? ಬೆಳಕು ಮತ್ತು ಕತ್ತಲೆಯು ಸಮಾಧಾನದಿಂದ ಒಂದುಗೂಡಿ ಇರಲಾರವು. ನಂಬಿಕೆಯು ಕುಟುಂಬಗಳನ್ನು ಯಾವಾಗಲೂ ಹೆಚ್ಚು ಪ್ರಶಾಂತ ವಾಗಿ ಮಾಡುವದಿಲ್ಲ; ಕೆಲವು ಸಲ ಅದು ಹೆಚ್ಚು ಘರ್ಷಣೆಯನ್ನು ಹುಟ್ಟಿಸುತ್ತದೆ. ನಂಬಿಕೆಯು ಯಾವಾಗಲೂ ಮದುವೆಗಳನ್ನು ಹೆಚ್ಚು ಸುರಕ್ಷಿತವಾಗಿಡುವದಿಲ್ಲ; ಕೆಲವು ಸಲ ಅದು ಬದುಕಿಗೆ ಪ್ರಮುಖ ಕಾರಣವಾಗುತ್ತದೆ. ನಂಬಿಕೆಯು ಯಾವಾಗಲೂ ಕೆಲಸದ ಮೇಲೆ ಸಂಗತಿಗಳನ್ನು ಸುಲಭವಾದವುಗಳನ್ನಾಗಿ ಮಾಡುವದಿಲ್ಲ; ಕೆಲವು ಸಲ ಅದು ವ್ಯಕ್ತಿಯನ್ನು ಹೊರಗೆ ಹಾಕುವಂತೆ ಮಾಡುತ್ತದೆ. ಯೇಸು ಒಂದು ಸಲ ಹೀಗೆ ಹೇಳಿದ್ದಾನೆ.

> ಭೂಲೋಕದಲ್ಲಿ ಸಮಾಧಾನವನ್ನುಂಟು ಮಾಡುವದಕ್ಕೆ ಬಂದನೆಂದು ಭಾವಿಸು ತ್ತೀರೋ? ಅದಕ್ಕೆ ಬರಲಿಲ್ಲ, ಭೇದವನ್ನುಂಟು ಮಾಡುವದಕ್ಕೆ ಬಂದನೆಂದು ನಿಮಗೆ ಹೇಳು ತ್ತೇನೆ. ಹೇಗಂದರೆ ಇಂದಿನಿಂದ ಒಂದೇ ಮನೆಯಲ್ಲಿರುವ ಐದು ಮಂದಿಯೊಳಗೆ ಇಬ್ಬರಿಗೆ ವಿರೋಧವಾಗಿ ಮೂವರು ಮೂವರಗೆ ವಿರೋಧವಾಗಿ ಇಬ್ಬರು ಈ ಮೇರೆಗೆ ಭೇದವುಳ್ಳವರಾಗುವರು. ಮಗನಿಗೆ ವಿರೋಧವಾಗಿ ತಂದೆಯು, ತಂದೆಗೆ ವಿರೋಧ ವಾಗಿ ಮಗನು, ಮಗಳಿಗೆ ವಿರೋಧವಾಗಿ ತಾಯಿಯು, ತಾಯಿಗೆ ವಿರೋಧವಾಗಿ ಮಗಳು, ಸೊಸೆಗೆ ವಿರೋಧವಾಗಿ ಅತ್ತೆಯು, ಅತ್ತೆಗೆ ವಿರೋಧವಾಗಿ ಸೊಸೆಯು ಭೇದ ವುಳ್ಳವರಾಗಿರುವರು (ಲೂಕ 12:51-53).

ನಂಬಿಕೆಯು ಕೆಲವು ಸಲ ತರುವ ಎಲ್ಲಾ ತೊಂದರೆಗಳ ಕಾರಣದಿಂದ, ನಾವು ಹಿಂದಿರುಗಿ ಹೋಗಲು ಶೋಧಿಸಲ್ಪಡಬಹುದು. ಹೀಗಿದ್ದರೂ, ಕುರುಡನಾಗಿ ಹುಟ್ಟಿದ ಮನುಷ್ಯನು ಬೆಳಕನ್ನು ಕಂಡಿದ್ದನು (ಒಂದಕ್ಕಿಂತ ಹೆಚ್ಚು ವಿಧಗಳಲ್ಲಿ) ಮತ್ತು ಅವನಿಗೆ ಹಿಂದಿರುಗಿ ಹೋಗು ವದು ಇರಲಿಲ್ಲ. ತಾನು ನಂಬಿದ್ದರಲ್ಲಿ ಅವನಿಗೆ ಭರವಸೆಯಿತ್ತು ಮತ್ತು ಅವನು ಸತ್ಯವೆಂದು ತಿಳಿದಿದ್ದರಿಂದ ದೂರ ಹೋಗುವಂತೆ ಯಾರೂ ಅವನನ್ನು ಭಯಪಡಿಸಲಿಕ್ಕೆ ಇರಲಿಲ್ಲ.

## "ನಾನು ನಂಬುತ್ತೇನೆ" (9:35-41)

ಅಷ್ಟು ಬೇಗನೇ ಈ ಮನುಷ್ಯನಿಗೆ ಅಷ್ಟು ಬಹಳವಾಗಿ ಸಂಭವಿಸಿತ್ತು! ಅವನ ಜೀವನದ ಅತೀ ದೊಡ್ಡ ದಿನವು ಅತೀ ಹೆಚ್ಚು ವಾದಗ್ರಸ್ತವಾದದ್ದೂ ಬೆಲೆಯುಳ್ಳದ್ದೂ ಆಗಿತ್ತು. ಅವನು ತನ್ನ ದೃಷ್ಟಿಯನ್ನು ಹೊಂದಿಕೊಂಡಿದ್ದನು, ಆದರೆ ಅವನು ಸಭಾಮಂದಿರದಿಂದ ಹೊರಗೆ ಹಾಕಲ್ಪಟ್ಟಿದ್ದನು. ಕನಿಷ್ಠ ಪಕ್ಷ, ಅವನು ತನ್ನ ನೆರೆಯವರ ಮುಖಗಳನ್ನು ನೋಡ ಬಲ್ಲವನಾಗಿದ್ದನು, ಆದರೆ ಅವನು ನೋಡಿದ ಕೆಲವು ಮುಖಗಳು ಕೋಪದಿಂದಲೂ ಗಲಿಬಿಲಿಯಿಂದಲೂ ತುಂಬಿ ಕೊಂಡವುಗಳಾಗಿದ್ದವು. ತನ್ನ ಸಮಾಜದಲ್ಲಿ ಅವನು ತನ್ನ ಸ್ಥಾನ ತೆಗೆದುಕೊಳ್ಳಲಾರದವನಾಗಿದ್ದನು, ಯಾಕಂದರೆ ಅವನು ಒಂದು ಭಾಗವಾಗಿದ್ದ ಬಹಿರಂಗ ಜನತೆಯಿಂದ ಅವನು ಅಪಹಾಸ್ಯಕ್ಕೆ ಮತ್ತು ತಿರಸ್ಕರಿಸುವಿಕೆಗೆ ಒಳಗಾಗಿದ್ದನು. ಸಮಸ್ಯೆಯು ಅವನ ತಲೆಯಲ್ಲಿ ತಿರುಗುತ್ತಿದ್ದಾಗ, ಅವನಿಗೆ ಪರಿಚಿತವಾಗಿದ್ದ ಆದರೆ ಅವನೆಂದೂ ನೋಡಿರದ ಒಬ್ಬನಿಂದ - ಯೇಸುವಿನಿಂದ ವಂದಿಸಲ್ಪಟ್ಟನು!

ನೀನು ಮನುಷ್ಯ ಕುಮಾರನನ್ನು ನಂಬುತ್ತೀಯೋ ಎಂದು ಯೇಸು ಅವನನ್ನು ಕೇಳಿದನು. ಪ್ರಶ್ನೆಯಿಂದ ಗಲಿಬಿಲಿಗೊಂಡವನಾಗಿ ಆದರೆ ಅದನ್ನು ಕೇಳಿದಾತನಲ್ಲಿ ಭರವಸೆಯುಳ್ಳವನಾಗಿ, "ಆತನು ಯಾರು ಸ್ವಾಮೀ? ತಿಳಿಸಿದರೆ ಆತನನ್ನು ನಂಬುತ್ತೇನೆ" (9:36) ಎಂದು ಆ ಮನುಷ್ಯನು ಹೇಳಿದನು. ಅವನಿಗೆ ಯೇಸು ತಾನೇ ಮನುಷ್ಯಕುಮಾರನು ಎಂದು ಹೇಳಿ

ದನು. ಅವನಿಗೆ ಯೇಸು ತಾನೇ ಮನುಷ್ಯಕುಮಾರನು ಎಂದು ಹೇಳಿದನು. ಅದನ್ನು ಕೇಳಿ ಕುರುಡನಾಗಿ ಹುಟ್ಟಿದವನು, "ನಂಬುತ್ತೇನೆ ಸ್ವಾಮೀ" ಎಂದು ಹೇಳಿದನು (9:38). ಮತ್ತು ಆತನನ್ನು ಆರಾಧಿಸಿದನು. ಆ ಮನುಷ್ಯನ ವಿಶ್ವಾಸದ ಪಯಣವು ಒಂದು ಮೈಲುಗಲ್ಲನ್ನು ತಲುಪಿತು. "ನಾನು ನಂಬುತ್ತೇನೆ" ಎಂದು ಅವನು ಹೇಳುವವನಾದನು.

ಕಥೆಯು ವಿವರಿಸಲ್ಪಡುವಾಗ ಆ ಮನುಷ್ಯನ ನಂಬಿಕೆಯ ಬೆಳವಣಿಗೆಯನ್ನು ಗಮನಿಸಿರಿ. "ನಾನೇ ಅವನು" ಎಂಬುದರಿಂದ, "ಯೇಸುವು ಕೆಸರನ್ನು ಮಾಡಿದನು" ಎಂಬುದಕ್ಕೆ "ಆತನು ಒಬ್ಬ ಪ್ರವಾದಿ" ಎಂಬುದಕ್ಕೆ "ನಾನು ಒಂದನ್ನು ಬಲ್ಲೆನು" ಎಂಬುದಕ್ಕೆ "ಆತನು ದೇವರಿಂದ ಬಂದವನು" ಎಂಬುದಕ್ಕೆ "ನಾನು ನಂಬುತ್ತೇನೆ" ಎಂಬುದಕ್ಕೆ ಅವನು ಹೋದನು. ಪ್ರತಿಯೊಂದು ಜಾಗರೂಕ ಹೆಜ್ಜೆಯು ಆ ಸಮಯದಲ್ಲಿ ಅವನು ಅರ್ಥಮಾಡಿ ಕೊಂಡದ್ದರ ಮೇಲೆ ಅವಲಂಬಿಸಿತ್ತು. ಅಪರಿಚಿತವಾದದ್ದರಲ್ಲಿ ಅವನು "ನಂಬಿಕೆಯ ಜಿಗಿತವನ್ನು" ಮಾಡಲಿಲ್ಲ, ವಿಶ್ವಾಸದ ಕಡೆಗೆ ನಿಶ್ಚಿತವಾದ ಹೆಜ್ಜೆಯ ಪಯಣದಲ್ಲಿ ಸ್ಥಿರವಾಗಿ ಮುನ್ನಡೆದನು.

## ಮುಕ್ತಾಯ

ಯೇಸುವು ತನ್ನ ಶಿಷ್ಯರಿಗೆ "ನಾನು ಲೋಕಕ್ಕೆ ಬೆಳಕಾಗಿದ್ದೇನೆ" (9:5ಬಿ) ಎಂದು ಹೇಳಿದನು. ನಮ್ಮ ಜಗತ್ತು ಪಾಪದ ಭಾರವಾದ ಕತ್ತಲೆಯಿಂದ ಹೊದಿಸಲ್ಪಟ್ಟಿದೆ. ಕತ್ತಲೆಯ ಬೆಳಕನ್ನು ಸಹಿಸಲಾರದು, ಯಾಕಂದರೆ ಎರಡೂ ಹೋರಟದಲ್ಲವೆ. ನೀನು ಒಬ್ಬ ಬೆಳಕಿನ ವ್ಯಕ್ತಿಯಾದರೆ, ಕತ್ತಲೆಯ ಸೈನ್ಯಗಳಿಗೆ ವಿರುದ್ಧವಾಗಿ ನೀನು ಭಯಂಕರವಾದ ಯುದ್ಧದಲ್ಲಿ ನಿನ್ನನ್ನು ಕಂಡುಕೊಳ್ಳುವಿ. ಅವುಗಳಿಗೆ ವಿರುದ್ಧವಾಗಿ ನೀನು ನಿಲ್ಲಲಾರೆ! ನಿನ್ನ ಬಗ್ಗೆ ನೀನು ತಿಳಿದುಕೊಂಡಿರುವದಕ್ಕೆ ಜೀವದ ಬಗ್ಗೆ, ಮತ್ತು ಯೇಸುವಿನ ಬಗ್ಗೆ ನೀನು ಅಂಟಿಕೊಂಡಿರಬಹುದು. ಇದನ್ನೂ ಮಾಡುವಲ್ಲಿ, ಸೂರ್ಯನು ಬೆಳಕಿನಲ್ಲಿ ಮೇಲೆ ಬರದಿದ್ದರೂ ನೀನು ಇನ್ನೂ ಯಾರಾಗಿರುವಿ ಮತ್ತು ನೀನು ಏನನ್ನು ನಂಬುವಿ ಎಂಬುದನ್ನು ತಿಳಿದಿರುವಿ!

ಕುರುಡನಾಗಿ ಹುಟ್ಟಿದ ಮನುಷ್ಯನು ತನ್ನ ಗುಣಪಡಿಸುವಿಕೆಯ ದಿನದಂದು ತಾನು ಎದುರಿಸಬೇಕಾದ ಎಲ್ಲಾ ಘರ್ಷಣೆಯ ಬಗ್ಗೆ ಕಲ್ಪಿಸಿಕೊಂಡಿದ್ದಿರಲಿಕ್ಕಿಲ್ಲ. ಹೀಗಿದ್ದರೂ, ತನ್ನ ದೃಷ್ಟಿಯನ್ನು ಪಡೆದು ಕೊಳ್ಳುವದರಲ್ಲಿ ಎಲ್ಲಾ ತೊಂದರೆಗಳನ್ನು ಅವನು ತಿಳಿದಿದ್ದರೂ, ಅವನು ಕುರುಡುತನದ ಬದಲು ದೃಷ್ಟಿಯನ್ನು ಆಯ್ದುಕೊಳ್ಳುತ್ತಿದ್ದನು ಎಂದು ನಾನು ನಂಬುತ್ತೇನೆ. ಯೇಸುವು ನಿಜವಾಗಿಯೂ "ಲೋಕಕ್ಕೆ ಬೆಳಕಾಗಿದ್ದಾನೆ" ಇಂದು ಆಮಂತ್ರಣವು ಬೆಳಕಿಗೆ ಬರಬೇಕು ಎಂಬುದಾಗಿದೆ!

---

ಟಿಪ್ಪಣಿಗಳು

[1]*New York Times Sunday Magazine*, 31 January 1993, xiii-NJ-4:6. [2]ನೋಡಿರಿ. ಯೆಹೋಶುವ 7:19.

## ಯಾವ "ಒಂದು ಸಂಗತಿಯನ್ನು" ನೀನು ತಿಳಿದಿರುವಿ?

ಕೆಲವೊಂದು ಕಾರಣದಿಂದ, ಯಾತನಾ ಶಿಬಿರಗಳಲ್ಲಿ ಕಾರಾಗ್ರಹ ವಾಸದ ಮುಖಾಂತರ ಜೀವಿಸಿದ ಜನರೊಂದಿಗೆ ನಾವು ಆಕರ್ಷಿಸಲ್ಪಡುತ್ತೇವೆ. ತಮ್ಮ ಭಯಂಕರವಾದ ಅನುಭವಗಳಲ್ಲಿ ಅವರು ತಮ್ಮ ಕುಟುಂಬಗಳಿಂದ, ತಮ್ಮ ಮನೆಗಳಿಂದ, ತಮ್ಮ ಕೆಲಸಗಳಿಂದ, ತಮ್ಮ ಬಟ್ಟೆಗಳಿಂದಲೂ ಸಹ ತೆಗೆದು ಹಾಕಲ್ಪಟ್ಟರು. ನಮ್ಮ ಪೀಡಿಸುವ ಪ್ರಶ್ನೆಗೆ ಉತ್ತರ ಕೊಡಲು ಅವರು ಈ ಅನಾಹುತಗಳಿಂದ ಹಿಂದಿರುಗಿ ಬಂದಿದ್ದಾರೆ: "ಇದೆಲ್ಲವೂ ತೆಗೆದು ಹಾಕಲ್ಪಡುವಾಗ, ಜೀವನದಲ್ಲಿ ಏನಾದರೂ ಉಳಿದುಕೊಳ್ಳುವುದೋ?" ವಿಪುಲವಾದ ಪ್ರಾಪಂಚಿಕ ಆಶೀರ್ವಾದಗಳಿರುವ ಜನರಿಂದ ಕೊಡಲ್ಪಟ್ಟ ಕ್ರಮಗಳಲ್ಲಿ ಒಂದು, ಜೀವನದ ಆತ್ಮಿಕ ಅಸ್ತಿವಾರಗಳ ಬಗ್ಗೆ ಅವರ ಅದ್ಭುತಕರವಾದ ಅಭದ್ರತೆಯಾಗಿರುತ್ತದೆ. "ನನಗೆ ಏನೂ ಇಲ್ಲದಿದ್ದರೆ, ನನಗೆ ಇನ್ನೂ ವಿಶ್ವಾಸವಿರುವುದೋ? ನಾನು ಭಯಂಕರವಾಗಿ ಶ್ರಮೆಪಡುವದಾದರೆ, ನಾನು ಇನ್ನೂ ಯೇಸುವಿನಲ್ಲಿ ನಂಬಿಕೆಯಿರುವುದೋ? ನನ್ನ ಜೀವಿತವು ಗಟ್ಟಿಯಾದ ಅಸ್ತಿವಾರದ ಮೇಲೆ ಕಟ್ಟಲ್ಪಟ್ಟಿರುವುದೋ?" ಎಂದು ಅವರು ಆಶ್ಚರ್ಯಪಡುವರು. ಯಾತನಾ ಶಿಬಿರಗಳಲ್ಲಿ ಉಳಿದುಕೊಂಡಿರುವವರು ಕಠಿಣವಾದ ಅನುಭವದಿಂದ ಈ ಪ್ರಶ್ನೆಗಳು ಉತ್ತರಗಳನ್ನು ತಿಳಿದಿರುವರು.

ಕುರುಡನಾಗಿ ಹುಟ್ಟಿದ ಮನುಷ್ಯನು ಯೆಹೂದ್ಯರಿಗೆ, "... ಒಂದು ಮಾತ್ರ ಬಲ್ಲೆನು, ಕುರುಡನಾಗಿದ್ದೆನು, ಈಗ ಕಣ್ಣುಕಾಣುತ್ತವೆ" (9:25) ಎಂದು ಹೇಳಿದನು. ನೀನು ತಿಳಿದಿರುವ "ಒಂದು ಸಂಗತಿ" ಯಾವುದು? ನಿನ್ನ ನಂಬಿಕಯ ಗಟ್ಟಿಯಾದ ಅಸ್ತಿವಾರವು ಯಾವುದು? ನಿಮ್ಮ ಭೂಲೋಕದ ಎಲ್ಲಾ ಆಶೀರ್ವಾದಗಳು ಫಕ್ಕನೇ ತೆಗೆದು ಕೊಂಡು ಒಯ್ಯಲ್ಪಟ್ಟರೆ, ನೀವು ಯಾವ ಸಂಗತಿಯ ಬಗ್ಗೆ ನಿಶ್ಚಿತತೆಯುಳ್ಳವರಾಗಿರುವಿ? ಈ ಪ್ರಶ್ನೆಗೆ ಬಹುಶಃ ಭಿನ್ನವಾದ ಜನರಿಗಾಗಿ ಭಿನ್ನವಾದ ಉತ್ತರಗಳಿರುವವು. "ಒಂದು ಸಂಗತಿಯನ್ನು ನಾನು ತಿಳಿದಿರುವೆನು: ಈ ಭೂಲೋಕವು ಒಬ್ಬ ಸೃಷ್ಟಿಕರ್ತನ ನಿಶ್ಚತವಾದ ಸಂಕೇತಗಳನ್ನು ತೋರಿಸುತ್ತದೆ!" ಎಂದು ಇತರರು ಹೇಳುವರು; "ಒಂದು ಸಂಗತಿಯನ್ನು ನಾನು ತಿಳಿದಿರುವೆನು: ನನ್ನ ಮಗುವಿನ ಜನನದಲ್ಲಿ ದೇವರ ಹಸ್ತವನ್ನು ನಾನು ನೋಡಿದೆನು" ಎಂದು ಹೇಳಬಹುದು. "ಒಂದು ಸಂಗತಿಯನ್ನು ನಾನು ತಿಳಿದಿರುವೆನು; ಪ್ರೀತಿಯು ಜಗತ್ತಿನಲ್ಲಿ ಅತೀ ಮಹತ್ವದ ಮತ್ತು ಬಲವುಳ್ಳ ಶಕ್ತಿಯಾಗಿದೆ" ಎಂದು ಹೇಳಬಹುದು. ನಿಶ್ಚಿತವಾಗಿ ನೀವು ತಿಳಿಯುವ "ಒಂದು ಸಂಗತಿ" ಯಾವುದು?